# ದಿನಾಂಕ: 25–4–2013ರಂದು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

ದಿನಾಂಕ: 25.4.2013ರಂದು ಕರ್ನಾಟಕ ಮಾಹಿತಿ ಆಯೋಗದ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಆಯೋಗದ ಎಲ್ಲಾ ಆಯುಕ್ತರುಗಳು ಹಾಗೂ ಇ–ಆಡಳಿತ, ಎನ್.ಐ.ಸಿ, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ಸಭೆ ಕರೆದಿದ್ದು, ಸದರಿ ಸಭೆಯಲ್ಲಿ ಈ ಕೆಳಕಂಡವರು ಉಪಸ್ಥಿತರಿದ್ದರು.

1. ರಾಜ್ಯ ಮುಖ್ಯ ಮಾಹಿತಿ ಆಯುಕ್ತರು, ಕಮಾಆ, ಬೆಂಗಳೂರು.
2. ಎಲ್ಲಾ ರಾಜ್ಯ ಮಾಹಿತಿ ಆಯುಕ್ತರು, ಕಮಾಆ, ಬೆಂಗಳೂರು.
3. ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಇ–ಆಡಳಿತ ಇಲಾಖೆ.
5. ನಿರ್ದೇಶಕರು(ಕಾರ್ಯಚರಣೆ), ಕಿಯೋನಿಕ್ಸ್ ಸಂಸ್ಥೆ.
6. ಕಾರ್ಯದರ್ಶಿಗಳು, ಕಮಾಆ, ಬೆಂಗಳೂರು.
7. ಕಾನೂನು ಅಧಿಕಾರಿಗಳು, ಕಮಾಆ, ಬೆಂಗಳೂರು.
8. ಅಧೀನ ಕಾರ್ಯದರ್ಶಿಗಳು, ಸಿಆಸುಇ(ಜನಸ್ಪಂದನ), ಬೆಂಗಳೂರು
9. ಅಧೀನ ಕಾರ್ಯದರ್ಶಿಗಳು(ಪ್ರಭಾರ), ಕಮಾಆ, ಬೆಂಗಳೂರು.
10. ಶ್ರೀ ಶ್ರೀನಿವಾಸ್, ಎ.ಎಸ್.ಓ, ಕಮಾಆ, ಬೆಂಗಳೂರು.

**ವಿಷಯ 1 – ಕರ್ನಾಟಕ ಮಾಹಿತಿ ಆಯೋಗದ ವೆಬ್‌ಸೈಟ್ ಮತ್ತು ದಾಖಲಾತಿ ವಿಧಾನದ ಉನ್ನತೀಕರಣ:**

ಈ ಬಗ್ಗೆ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಮಾತನಾಡುತ್ತಾ, ಉನ್ನತ ಸಮಿತಿಯ ತೀರ್ಮಾನದಂತೆ ಮಾಹಿತಿ ಆಯೋಗಕ್ಕೆ ಸಂಬಂಧಿಸಿದಂತೆ ಎನ್.ಐ.ಸಿ.ಯವರು ಸಿದ್ಧಪಡಿಸಿರುವಂತೆ ಆನ್‌ಲೈನ್ ಮೂಲಕ ಸ್ವೀಕೃತಿ ಮತ್ತು ಅವುಗಳ ದಾಖಲಾತಿ ಪ್ರಕ್ರಿಯೆಯು ಸಮರ್ಪಕವಾಗಿ ನಡೆಯುತ್ತಿಲ್ಲ ಮತ್ತು ಆಯಾಕಾಲಕ್ಕೆ 'ಅಪ್‌ಡೇಟ್' ಮಾಡಲಾಗುತ್ತಿಲ್ಲ. ಹಾಗೆಯೇ ಕರ್ನಾಟಕ ಮಾಹಿತಿ ಆಯೋಗದ ವೆಬ್‌ಸೈಟ್ ಅನ್ನೂ ಸಹ ಉನ್ನತೀಕರಿಸಿಲ್ಲ, ಆಯೋಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತಿದ್ದು ಅವುಗಳನ್ನು ದತ್ತನಮೂದನೆ ಮಾಡಿ ಪ್ರಕಟಪಡಿಸಬೇಕಾಗಿರುತ್ತದೆ. ಪ್ರಸ್ತುತ ಈ ಎಲ್ಲಾ ಅಂಶಗಳ ದಾಖಲೀಕರಣವನ್ನು ವಾರ್ಷಿಕ ವರದಿಯಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದ್ದು, ಇದರಿಂದ ಇಲಾಖೆಯ ಮುಖ್ಯಸ್ಥರುಗಳಿಗೆ ಅನುಕೂಲವಾಗುತ್ತದೆ. ಇಲಾಖಾ ಮಟ್ಟದಲ್ಲಿ ಅಳವಡಿಸಿರುವ 4(l)ಎ ಮತ್ತು 4(l)ಬಿ ವಿವರಗಳನ್ನು ಕಾಲಮಿತಿಯಲ್ಲಿ ಹಲವು ವರ್ಷಗಳವರೆಗೂ ಅಪ್‌ಡೇಟ್ ಮಾಡದೇ ಇರುವುದು ಕಂಡುಬಂದಿರುತ್ತದೆ. ಇದರಿಂದ ಅರ್ಜಿ/ಕಡತಗಳ ಬಗೆಗಿನ ವಸ್ತುಸ್ಥಿತಿ ಮಾಹಿತಿಯು ತಿಳಿಯುವುದಿಲ್ಲ. ಹೀಗೆ ಮಾಡಿದಾಗ ಒಂದು ವೇಳೆ ಕಡತ ಲಭ್ಯವಿಲ್ಲವೆಂದರೆ 'ಲಭ್ಯವಿಲ್ಲ' ಎಂದು ತಿಳಿಸುವ ಹೊಣೆಗಾರಿಕೆ ಸಾರ್ವಜನಿಕ ಮಾಹಿತಿ ಅಧಿಕಾರಿಯದ್ದಾಗಿರುತ್ತದೆ ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ಸರ್ಕಾರದ ಉನ್ನತ ಮಟ್ಟದ ಸಮಿತಿಯು ಪರಿವೀಕ್ಷಣೆಯ ವರದಿಯನ್ನು ತಮಗೆ ನೀಡುವಂತೆ ಜನಸ್ಪಂದನ ಇಲಾಖೆಯ ಅಧೀನ ಕಾರ್ಯದರ್ಶಿಗಳಿಗೆ ತಿಳಿಸಿದರು. ಈ ಬಗ್ಗೆ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಎರಡು ಸಭೆಗಳು ನಡೆದಿರುವ ವಿಷಯವನ್ನು ಅಧೀನ ಕಾರ್ಯದರ್ಶಿಗಳು ಆಯುಕ್ತರ ಗಮನಕ್ಕೆ ತಂದರು. ಹಾಗೂ ನಡವಳಿಕೆಗಳ ಪ್ರತಿಗಳನ್ನು ಆಯೋಗಕ್ಕೆ ಕಳುಹಿಸಿ ಕೊಡುವುದಾಗಿ ಹೇಳಿರುತ್ತಾರೆ.

ಎನ್.ಐ.ಸಿ. ಅಧಿಕಾರಿಯು 4(l)ಎ ಮತ್ತು 4(l)ಬಿ ಸ್ವೀಕೃತಿಗಳ ಬಗ್ಗೆ 'ಪಬ್ಲಿಕ್ ಅಥಾರಿಟಿ' ಲಾಗ್‌ಇನ್ ಮೂಲಕ ಲಿಂಕ್ ನೀಡಿ ಆಯೋಗದಿಂದ ಅಪ್‌ಲೋಡ್ ಮಾಡಲಾಗುತ್ತಿದೆ. ರಾಜ್ಯದಲ್ಲಿ ಬಹಳ ಮಂದಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿದ್ದು ಅವರುಗಳಿಗೆ ಪ್ರತ್ಯೇಕ ಲಾಗ್‌ಇನ್ ಐ.ಡಿ. ನೀಡಿ ನಂತರ ಅಪ್‌ಲೋಡ್ ಮಾಡುವುದು ಬಹಳ ಕಷ್ಟವಾಗಿರುತ್ತದೆ. 4(l)ಎ ಮತ್ತು 4(l)ಬಿ ಮಾಹಿತಿಗಳಿಗೆ ಸಂಬಂಧಿಸಿದಂತೆ ಆಯಾ ಇಲಾಖಾ ಮುಖ್ಯಸ್ಥರು ಪ್ರಕಟಿಸುವ ಮಾಹಿತಿಗೂ ಮತ್ತು ನಮ್ಮ ಅಪ್‌ಲೋಡ್ ಮಾಹಿತಿಗೂ ವ್ಯತ್ಯಾಸವಿರುವುದು ಕಂಡು ಬಂದಿದೆ ಎಂದು ತಿಳಿಸಿದರು.

ನಂತರ ಮಾತನಾಡಿದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು, ಕಾಯ್ದೆಯ ಕಲಂ 4(l)ಎ ಮತ್ತು 4(l)ಬಿ ವಿವರಗಳು ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಅಪ್‌ಡೇಟ್ ಆಗಬೇಕು. ಇದರಿಂದ ಆಯೋಗವು ಪರಿವೀಕ್ಷಿಸಲು ಅನುವಾಗುವುದು ಮತ್ತು ಇದಕ್ಕೆ ಪೂರಕವಾಗಿ ಜನಸ್ಪಂದನ ಇಲಾಖೆ ಎಲ್ಲಾ ಇಲಾಖೆಗಳಿಗೆ ಸೂಚನೆ ನೀಡಿ ಅವರು ಇಲಾಖೆಯ ಸಂಬಂಧಪಟ್ಟ ವಿವರಗಳನ್ನು ಅಪ್‌ಡೇಟ್ ಮಾಡುವಂತೆ ಸುತ್ತೋಲೆ ಹೊರಡಿಸಬೇಕು. ಇದನ್ನು ಅಂತರ್ಜಾಲದಲ್ಲಿ ಅಳವಡಿಸುವ ಜವಾಬ್ದಾರಿ ಎನ್.ಐ.ಸಿ.ಯವರು ವಹಿಸಕೊಳ್ಳುವುದು ಮತ್ತು ಇ–ಆಡಳಿತ ಇಲಾಖೆಯವರು ಜನಸ್ಪಂದನ ಇಲಾಖೆ ವೆಬ್‌ಸೈಟ್‌ನಲ್ಲಿ ಸಾಕಷ್ಟು ಮಾಹಿತಿ ಅಳವಡಿಸಲು ಅನುಕೂಲವಾಗುವಂತೆ ವೆಬ್‌ಸೈಟ್ ನವೀಕರಣ ಮಾಡಬೇಕು ಎಂದು ಎನ್.ಐ.ಸಿ. ಅಧಿಕಾರಿಗೆ ತಿಳಿಸಲಾಯಿತು.

ಇದಕ್ಕೆ ಸ್ಪಂದಿಸಿದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು, ಜನಸ್ಪಂದನ ಇಲಾಖೆ ವೆಬ್‌ಸೈಟ್ ಹಾಗೂ ಇತರೆ ಇಲಾಖೆಗಳ ವೆಬ್‌ಸೈಟ್ ಎರಡಕ್ಕೂ ಒಂದು ಲಿಂಕ್ ನೀಡಬೇಕು, ಹಾಗೆಯೇ ಈ ಮೂಲಕ ಜನಸ್ಪಂದನ ಇಲಾಖೆಯ ವೆಬ್‌ಸೈಟ್‌ನಿಂದ ಲಿಂಕ್ ಪಡೆದು, ಅದರಲ್ಲಿ ಬೇರೆ ಇಲಾಖೆಗಳ 4(1)ಎ ಮತ್ತು 4(1)ಬಿ ವಿವರಗಳನ್ನು ಪರಿಶೀಲಿಸಲು ಸಾಧ್ಯವಾಗುವಂತೆ ತಂತ್ರಾಂಶ ಸಿದ್ಧಪಡಿಸಲು ತಿಳಿಸಿದರು. ಇದಕ್ಕೆ ಉತ್ತರಿಸಿದ ಎನ್.ಐ.ಸಿ ಅಧಿಕಾರಿಯು ಈಗಾಗಲೇ ಎನ್.ಐ.ಸಿ ಮೂಲಕ ಸಿದ್ಧಪಡಿಸಿರುವ 'ಜನಸ್ಪಂದನ' ವೆಬ್‌ಸೈಟ್ ಮೂಲಕ ಪರಿಶೀಲಿಸಿ ಅದೇ ಲಿಂಕ್‌ನ್ನು ಇತರೆ ಇಲಾಖೆಗೆ ಲಿಂಕ್ ಮಾಡಬಹುದಾಗಿ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜನಸ್ಪಂದನ ಇಲಾಖೆಯ ಅಧೀನ ಕಾರ್ಯದರ್ಶಿಗಳು ತಮ್ಮ ಇಲಾಖೆಯ 'ಇಂಟರ್‌ನೆಟ್' ಸೌಲಭ್ಯ ಸಮರ್ಪಕವಾಗಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ನಂತರ ಮಾತನಾಡಿದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು 4(1)ಎ ಮತ್ತು 4(1)ಬಿ ವಿವರಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಆಯಾ ಇಲಾಖೆಯ ವೆಬ್‌ಸೈಟ್‌ಗಳಲ್ಲಿ ಪ್ರಕಟಪಡಿಸುವಂತೆ ಹಾಗೂ ವಸ್ತುಸ್ಥಿತಿಯನ್ನು ಪರಿವೀಕ್ಷಿಸಲು ಆಯೋಗಕ್ಕೆ ಅನುಕೂಲವಾಗುವಂತೆ ಜನಸ್ಪಂದನ ಇಲಾಖೆಯ ವೆಬ್‌ಸೈಟ್ ಮೂಲಕ ಲಿಂಕ್ ನೀಡಲು ಕ್ರಮವಹಿಸುವಂತೆ ತಿಳಿಸಿದರು ಮತ್ತು 'ಇ-ಆಡಳಿತ'ದ ಮೂಲಕ ಎಲ್ಲಾ ಇಲಾಖೆಯ ಮಾಹಿತಿಯೂ ಅಪ್‌ಡೇಟ್ ಆಗಿದೆಯೇ ಮತ್ತು ಜನಸ್ಪಂದನ ವೆಬ್‌ಸೈಟ್‌ನೊಂದಿಗೆ ಲಿಂಕ್ ಆಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ತಿಳಿಸಿದರು.

ನಂತರ ಮಾತನಾಡಿದ ಎನ್.ಐ.ಸಿ ಅಧಿಕಾರಿಯು, ರಾಜ್ಯದ ಎಲ್ಲಾ ಇಲಾಖೆಗಳಲ್ಲಿ ಮಾಹಿತಿ ಕೋರಿ ಸ್ವೀಕೃತವಾಗುವ ಅರ್ಜಿಗಳನ್ನು ದಾಖಲು ಮಾಡಿ ಅಪ್‌ಲೋಡ್ ಮಾಡಿದ ಲಿಂಕ್‌ನ್ನು ಜನಸ್ಪಂದನದ ಲಿಂಕ್‌ನೊಂದಿಗೆ ಜೋಡಣೆ ಮಾಡಲು ಸಾಧ್ಯವಿದ್ದು ಈ ರೀತಿ ಮಾಡಿದಾಗ ಆಯೋಗವು ವೆಬ್‌ಸೈಟ್ ಮೂಲಕವೇ ಪರಿವೀಕ್ಷಣೆ ನಡೆಸಲು ಅನುಕೂಲವಾಗುವಂತೆ ಸಿದ್ಧಪಡಿಸಲಾಗುವುದು ಎಂದು ತಿಳಿಸಿದರು. ಉದಾಹರಣೆಗೆ: ಕೃಷಿ ಇಲಾಖೆಯ ಅಧೀನದಲ್ಲಿ ಬರುವ ಜಿಲ್ಲಾ ಮಟ್ಟದ ಅಧಿಕಾರಿಗಳ ಕಚೇರಿಯಲ್ಲಿ ಸ್ವೀಕೃತವಾಗುವ ಎಲ್ಲಾ ಅರ್ಜಿ ಮತ್ತು ಅವುಗಳ ನಿರ್ವಹಣೆಯ ಮಾಹಿತಿಯನ್ನು ಜನಸ್ಪಂದನ ವೆಬ್‌ಸೈಟ್‌ನ ಪ್ರಧಾನ ಕೇಂದ್ರದ ಲಿಂಕ್ ಮೂಲಕ ಪರಿವೀಕ್ಷಿಸಬಹುದು.

ಇದಕ್ಕೆ ಪ್ರತಿಕ್ರಿಯಿಸಿದ 'ಇ-ಆಡಳಿತ'ದ ಅಧಿಕಾರಿಯು ಜನಸ್ಪಂದನವನ್ನು ಹೈಪರ್ ಲಿಂಕ್ ಅನ್ನಾಗಿ ಮಾಡಿ kar.gov.in ಮೂಲಕ ವೆಬ್‌ಪೇಜ್ ವಿನ್ಯಾಸಗೊಳಿಸಲು ಸಾಧ್ಯವಿದ್ದು ಕೂಡಲೇ ಇದರ ಬಗ್ಗೆ ಕ್ರಮವಹಿಸುವುದಾಗಿ ಮತ್ತು ಜನಸ್ಪಂದನ ಇಲಾಖೆಯ ವೆಬ್‌ಸೈಟ್‌ನ್ನು ಅಪ್‌ಡೇಟ್ ಮಾಡುವುದಾಗಿ ತಿಳಿಸಿದರು.

ನಂತರ ಮಾತನಾಡಿದ ಮುಖ್ಯ ಆಯುಕ್ತರು, ವಿನ್ಯಾಸಗೊಳಿಸುವ ವೆಬ್‌ಪೇಜ್‌ನಲ್ಲಿ ಯಾವಯಾವ ಮಾಹಿತಿ ಇರಬೇಕೆಂದು ತಿಳಿಸಲು ಒಬ್ಬ ತಂತ್ರಜ್ಞರ ಅವಶ್ಯಕತೆಯಿದೆಯೇ ಎಂದು ಕೇಳಲಾಗಿ, ಇದಕ್ಕೆ ಸ್ಪಂದಿಸಿದ ಇ-ಆಡಳಿತದ ಅಧಿಕಾರಿಯು ಅಪ್‌ಡೇಟ್ ಮಾಡುವುದಕ್ಕೆ ಮತ್ತು ವೆಬ್‌ಪೇಜ್ ಯಾವ್ಯಾವ ಮಾಹಿತಿಗಳನ್ನು ಒಳಗೊಂಡಿರಬೇಕು (Content Creator) ಎಂದು ತಿಳಿಸಲು ಇಲಾಖೆಯ ಪರವಾಗಿ ಒಬ್ಬ ಅಧಿಕಾರಿಯನ್ನು ನೇಮಿಸುವಂತೆ ಕೋರಿದರು.

ನಂತರ ಮಾತನಾಡಿದ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ಜನಸ್ಪಂದನ, ಎನ್.ಐ.ಸಿ. ಮತ್ತು ಇ-ಆಡಳಿತದ ಅಧಿಕಾರಿಗಳನ್ನೊಳಗೊಂಡ ಒಂದು ಸಭೆಯನ್ನು ಕರೆದು ಇದರ ಬಗ್ಗೆ ತೀರ್ಮಾನ ಕೈಗೊಳ್ಳುವಂತೆ ಜನಸ್ಪಂದನ ಇಲಾಖೆಯ ಅಧೀನ ಕಾರ್ಯದರ್ಶಿಗಳಿಗೆ ಸೂಚಿಸಿದರು. ಸಭೆಯನ್ನು ಒಂದು ವಾರದೊಳಗೆ ಕರೆದು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆಯೂ ಸಹ ಸೂಚಿಸಿದರು.

ಮುಂದುವರೆದು, 4(1)ಎ ಮತ್ತು 4(1)ಬಿ ಮಾಹಿತಿ ನಿರ್ವಹಣೆಗಾಗಿ ಕೇಂದ್ರ ಸರ್ಕಾರದ ಡಿ.ಓ.ಪಿ.ಟಿ ಇಲಾಖೆಯಿಂದ ಸಾಕಷ್ಟು ಅನುದಾನ ದೊರೆಯಲಿದ್ದು, ಈ ಬಗ್ಗೆ ಕಿಯೋನಿಕ್ಸ್ ಸಂಸ್ಥೆಯು ಒಂದು ನೋಡಲ್ ಸಂಸ್ಥೆಯಾಗಿ, ಮಾಹಿತಿ ನಿರ್ವಹಣೆ ಕಾರ್ಯವನ್ನು ಸರ್ಕಾರದ ಎಲ್ಲಾ ಇಲಾಖೆಗಳ ಪರವಾಗಿ ಕೈಗೊಳ್ಳುವ ಬಗ್ಗೆ ತಕ್ಷಣ ಒಂದು ಸಮಗ್ರ ತಂತ್ರಾಂಶವನ್ನು ಒಳಗೊಂಡ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಜನಸ್ಪಂದನ ಇಲಾಖೆ ಮೂಲಕ ಕೇಂದ್ರ ಸರ್ಕಾರಕ್ಕೆ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸುವಂತೆಯೂ ಸಹಾ ಸೂಚನೆ ನೀಡಿದರು.

ನಿರ್ಣಯ:

1. **ಕರ್ನಾಟಕ ಮಾಹಿತಿ ಆಯೋಗದ ವೆಬ್‌ಸೈಟ್ ಮತ್ತು ದಾಖಲಾತಿ ವಿಧಾನದ ಉನ್ನತೀಕರಣಕ್ಕಾಗಿ ಜನಸ್ಪಂದನ ಇಲಾಖೆಯು ಒಂದು ವಾರದ ಒಳಗೆ ಎನ್.ಐ.ಸಿ. ಹಾಗೂ ಇ-ಆಡಳಿತ ಇಲಾಖೆಗಳ ಅಧಿಕಾರಿಗಳನ್ನೊಳಗೊಂಡ ಸಭೆಯನ್ನು ಕರೆಯುವುದು.**

2. **ವೆಬ್‌ಪೇಜ್ ವಿನ್ಯಾಸಗೊಳಿಸಿ ಜನಸ್ಪಂದನ ಇಲಾಖೆಯನ್ನು ಪ್ರಧಾನವಾಗಿರಿಸಿ ಇತರ ಇಲಾಖೆಗಳ ಮಾಹಿತಿ ಹಕ್ಕು ಕುರಿತಾದ ಅರ್ಜಿ / ಕಡತಗಳ / ಮೊದಲನೇ ಮೇಲ್ಮನವಿಗಳ ನಿರ್ವಹಣೆಯ ಲಿಂಕ್ ನೀಡುವುದು.**

3. **ವೆಬ್‌ಪೇಜ್‌ನಲ್ಲಿ ಅಳವಡಿಸಬೇಕಾದ 'ಕಂಟೆಂಟ್ ಪೇಜ್' ಮಾಹಿತಿಯನ್ನು ಇ–ಆಡಳಿತ ಇಲಾಖೆ ಮೂಲಕ ಜನಸ್ಪಂದನ ಇಲಾಖೆಯವರು ಒದಗಿಸಿ, ಎನ್.ಐ.ಸಿ. ಮೂಲಕ ಕೂಡಲೇ ವೆಬ್‌ಸೈಟ್ ಅನ್ನು ಉನ್ನತೀಕರಣಗೊಳಿಸಲು ಇ–ಆಡಳಿತ, ಎನ್.ಐ.ಸಿ ಹಾಗೂ ಜನಸ್ಪಂದನ ಇಲಾಖೆಗಳು ಕ್ರಮ ಜರುಗಿಸುವುದು.**

ಇದಕ್ಕೆ ಇ–ಆಡಳಿತ ಇಲಾಖೆಯ ಅಧಿಕಾರಿ ಹಾಗೂ ಎನ್.ಐ.ಸಿ.ಯ ಅಧಿಕಾರಿಯಗಳು ಒಪ್ಪಿಗೆ ಸೂಚಿಸಿ ಸಭೆಯಿಂದ ಬೀಳ್ಕೊಂಡರು.

**ವಿಷಯ 3 – ಕರ್ನಾಟಕ ಮಾಹಿತಿ ಆಯೋಗದ ಕಚೇರಿಯ ನೂತನ ಕಟ್ಟಡದ ಬಗ್ಗೆ :**

ಈ ಬಗ್ಗೆ ವಿಷಯ ಪ್ರಸ್ತಾಪಿಸುತ್ತಾ ಪ್ರಸ್ತುತ ಕಾರ್ಯಹಂತದ ಬಗ್ಗೆ ಮುಖ್ಯ ಆಯುಕ್ತರು ಮಾಹಿತಿ ಕೇಳಲಾಗಿ, ಅದಕ್ಕೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರು ಕಟ್ಟಡವು 17.3 ಕೋಟಿಗಳ ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದು, 24 ತಿಂಗಳುಗಳ ಅವಧಿಯನ್ನು ನೀಡಲಾಗಿದೆ ಎಂದು ಸಭೆಗೆ ತಿಳಿಸುತ್ತಾ ಪ್ರಗತಿ ಕಾರ್ಯದ ಕುರಿತಾಗಿ ಈಗಾಗಲೇ ಭೂಮಿ ಅಗೆಯುವ ಕೆಲಸ ಮುಗಿದಿದ್ದು, ಏಟ್ರಿಯಾ ಹೋಟೆಲ್‌ನ ಸ್ಯಾನಿಟರಿ ಪೈಪ್ ಮತ್ತು ಕೆ.ಪಿ.ಎಸ್.ಸಿ.ಯ ಸ್ಯಾನಿಟರಿ ಪೈಪ್‌ಗಳು ಇದ್ದುದರಿಂದ ಅವುಗಳನ್ನು ವರ್ಗಾಯಿಸುವ ಕೆಲಸ ಈವರೆಗೆ ಮುಗಿದಿದ್ದು, ದಿನಾಂಕ: 26.4.2013ರಿಂದಲೇ ಬೇಸ್ ಕಾಂಕ್ರೀಟ್ ಹಾಕುವ ಕೆಲಸವನ್ನು ಕೈಗೊಳ್ಳಲಾಗುವುದಾಗಿ ತಿಳಿಸಿದರು. ಮುಂದುವರೆದು, ಈಗಾಗಲೇ ಮೂಲ ಯೋಜನೆಯಂತೆ ಡ್ರಾಯಿಂಗ್ಸ್ ನೀಡಲಾಗಿದ್ದು, ಹೊಸ ವಿನ್ಯಾಸದ ತಿದ್ದುಪಡಿಗಳೊಂದಿಗೆ ಹೊಸ ಡ್ರಾಯಿಂಗ್ ನೀಡಲು ಬಾಕಿ ಇರುವುದಾಗಿ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಕೆಲಸವು ತ್ವರಿತಗತಿಯಲ್ಲಿ ನಡೆಯುವಂತೆ ಸಂಬಂಧಪಟ್ಟವರಿಗೆ ಸೂಚನೆ ನೀಡುವುದಾಗಿ ತಿಳಿಸಿದರು ಮತ್ತು ಅಗತ್ಯ ಬಿದ್ದಲ್ಲಿ ಕಂಟ್ರಾಕ್ಟರ್‌ರನ್ನು ಬದಲಾವಣೆ ಮಾಡಿಯಾದರೂ ನಿಗಧಿತ ಸಮಯದೊಳಗೆ ಕಟ್ಟಡ ಪೂರ್ಣಗೊಳಿಸಲು ಅಗತ್ಯಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

**ನಿರ್ಣಯ : ಈಗಾಗಲೇ ರೂಪಿಸಲಾಗಿರುವ ಯೋಜನೆಯಂತೆ ಕಾಲಮಿತಿಯಲ್ಲಿ ಮತ್ತು ಕಾಲಕಾಲಕ್ಕೆ ಆಗುವ ಪ್ರಗತಿ ಕಾರ್ಯದ ಬಗ್ಗೆ ಪರಿಶೀಲಿಸುವಂತೆ ಮತ್ತು ಅದರ ಬಗ್ಗೆ ಆಯೋಗಕ್ಕೆ ಮಾಹಿತಿ ನೀಡುವಂತೆ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿ, ಪ್ರಧಾನ ಕಾರ್ಯದರ್ಶಿಗಳನ್ನು ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಕೋರಲಾಯಿತು.**

ಇದಕ್ಕೆ ಒಪ್ಪಿಗೆ ಸೂಚಿಸುತ್ತಾ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಸಭೆಯಿಂದ ಬೀಳ್ಕೊಂಡರು.

ನಂತರ ಮಾತನಾಡಿದ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ಆಯೋಗದ ಸಿಬ್ಬಂದಿಯಲ್ಲೊಬ್ಬರಾದ ಶ್ರೀ ವೆಂಕಟೇಶ್‌ರವರ ವಿರುದ್ಧ ದೂರುಗಳಿದ್ದು, ಕೆ.ಎಸ್.ಆರ್.ಟಿ.ಸಿ.ಯ ಪರಿಷ್ಕೃತ ವೇತನದ ಆದೇಶ ಅವರ ಬಳಿಯಿದ್ದರೂ ಸಹ ಸ್ಪಷ್ಟೀಕರಣಕ್ಕಾಗಿ ಕೆ.ಎಸ್.ಆರ್.ಟಿ.ಸಿ.ಗೆ ಪತ್ರ ಬರೆದು ಅನಗತ್ಯ ವಿಳಂಬ ಮಾಡಿರುವ ಪ್ರಕರಣವನ್ನು ಉದಾಹರಿಸುತ್ತಾ, ಸದರಿ ನೌಕರರನ್ನು ಆಡಳಿತ ಶಾಖೆಯಿಂದ ಅಕೌಂಟ್ಸ್ ಶಾಖೆಗೆ ವರ್ಗಾವಣೆ ಮಾಡುವಂತೆ ಆಯೋಗದ ಕಾರ್ಯದರ್ಶಿಯವರಿಗೆ ಸೂಚಿಸಿದರು. ಕಾರ್ಯದರ್ಶಿಗಳು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

**ವಿಷಯ 3 – ಆಯೋಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಆಧಾರದ ನೌಕರರ ವೇತನ ಹೆಚ್ಚಳ:**

ಆಯೋಗದ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ವಿಷಯವನ್ನು ಪ್ರಸ್ತಾಪಿಸಿ, ಈ ಬಗ್ಗೆ ಆಯೋಗದ ಕಾರ್ಯದರ್ಶಿಗಳನ್ನು ಕೇಳಲಾಗಿ, ಕಾರ್ಯದರ್ಶಿಗಳು ಇದಕ್ಕೆ ಉತ್ತರಿಸುತ್ತಾ ಆಯೋಗದಲ್ಲಿ ಹೊರಗುತ್ತಿಗೆಯ ಮೂಲಕ ಮಾನವ ಸಂಪನ್ಮೂಲವನ್ನು ಪಾರದರ್ಶಕ ನಿಯಮದ ಅಡಿಯಲ್ಲಿ ಟೆಂಡರ್‌ನ್ನು ಕರೆದು ಸಿಬ್ಬಂದಿಯ ಸೇವೆಯನ್ನು ಒದಗಿಸಲಾಗುತ್ತಿದ್ದು, ಈ ಪ್ರಕ್ರಿಯೆಯಲ್ಲಿ ಹೊರಗುತ್ತಿಗೆ ಆಧಾರದ ನೌಕರರಿಗೆ ಕಾರ್ಮಿಕ ಇಲಾಖೆಯವರು ನಿಗಧಿಪಡಿಸಿರುವ ಕನಿಷ್ಟ ವೇತನಕ್ಕಿಂತಲೂ ಹೆಚ್ಚಿನ ವೇತನವನ್ನು ನಮೂದಿಸಿ ಅತ್ಯಂತ ಕಡಿಮೆ ಸೇವಾ ಶುಲ್ಕವನ್ನು ನಮೂದಿಸಿರುವ ಏಜೆನ್ಸಿಗಳಿಗೆ ಕಾರ್ಯಾದೇಶ ನೀಡಬೇಕಾಗುತ್ತದೆ.

ಆದರೆ, ಆಯೋಗದಲ್ಲಿ ಹಾಲಿ ನೀಡಿರುವ ಟೆಂಡರ್‌ನಲ್ಲಿ ಕಾರ್ಮಿಕ ಇಲಾಖೆಯು ನಿಗಧಿಪಡಿಸಿರುವ ಕನಿಷ್ಠ ವೇತನದ ಬದಲು, ಇದೇ ವರ್ಗದ ಸರ್ಕಾರಿ ನೌಕರರಿಗೆ ನೀಡುವ ವೇತನ ಶ್ರೇಣಿಯ ಕನಿಷ್ಠ ಮೂಲವೇತನದಲ್ಲಿ ಅಂದಾಜು 100 ರೂ.ಗಳಷ್ಟು ಕಡಿತಗೊಳಿಸಿ ಇದನ್ನು ಕನಿಷ್ಠ ವೇತನವೆಂದು ಪರಿಗಣಿಸಿ, ಇದರ ಅನ್ವಯ ಟೆಂಡರ್ ಕರೆದು ಕಡಿಮೆ ಸೇವಾ ಶುಲ್ಕ ನಮೂದಿಸಿರುವ ಟೆಂಡರ್‌ದಾರರಿಗೆ ಹೊರಗುತ್ತಿಗೆ ಮೂಲಕ ಸಿಬ್ಬಂದಿ ಸರಬರಾಜು ಗುತ್ತಿಗೆಯನ್ನು ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು, ಆಯೋಗವು ಹೊರಗುತ್ತಿಗೆಯವರಿಗೆ ನೀಡಬೇಕಾಗಿರುವ ಕನಿಷ್ಟ ವೇತನ ಪಾವತಿಯ ನಿಯಮವನ್ನು ಪಾಲಿಸುತ್ತಿದೆ ಎಂದು ತಿಳಿಸಿದರು.

ಇದಕ್ಕೆ ಸ್ಪಂದಿಸಿದ ಆಯುಕ್ತರಾದ ಶ್ರೀ ಡಿ.ತಂಗರಾಜುರವರು ನಿಯಮಾನುಸಾರ ಇರುವ ಕನಿಷ್ಠ ವೇತನಕ್ಕಿಂತಲೂ ಹೆಚ್ಚಿನ ವೇತನವನ್ನು ಸಂದಾಯ ಮಾಡುತ್ತಿದ್ದು, ಕಡಿಮೆ ವೇತನವನ್ನು ನೀಡಿದಾಗ ಮಾತ್ರ ನಿಯಮ ಉಲ್ಲಂಘಿಸಿದಂತಾಗುತ್ತದೆ ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಟೆಂಡರ್ ನಮೂದಿಸುವವರು ಸಿಬ್ಬಂದಿಯನುಸಾರ ದರವನ್ನು ನಮೂದಿಸುವುದಿಲ್ಲ; ಬದಲಿಗೆ ಅವರ ಸೇವೆಯ ಅನುಸಾರದಲ್ಲಿ ಟೆಂಡರ್ ನಮೂದಿಸುತ್ತಿದ್ದು, ಈ ಮೂಲಕ ಯಾರು ಕಡಿಮೆ ಸೇವಾ ಶುಲ್ಕವನ್ನು ನಿಗಧಿಪಡಿಸುತ್ತಾರೋ ಅವರನ್ನು ಎಲ್1 ಎಂದು ಪರಿಗಣಿಸಬೇಕಾಗುತ್ತದೆ ಎಂದು ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಆಯೋಗಕ್ಕೆ ಸಂಪೂರ್ಣ ಮಾಹಿತಿ ನೀಡಿದ ಕಾರ್ಯದರ್ಶಿಗಳು, ಆಯೋಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಆಧಾರದ ನೌಕರರಿಗೆ 'ಬೇಸಿಕ್ ಪೇ' ಆಧರಿಸಿ, ಕನ್ಸಾಲಿಡೇಟೆಡ್ ಪೇ ನೀಡಲಾಗುತ್ತಿದೆ. ಕಾರ್ಮಿಕ ಇಲಾಖೆಯ ನಿಯಮಗಳನ್ವಯ ನಿಗಧಿಮಾಡಲಾಗಿರುವ ವೇತನಕ್ಕೆ ಹೋಲಿಸಿದಲ್ಲಿ ಪ್ರಸ್ತುತ ಹೆಚ್ಚಿನ ವೇತನ ಸಂದಾಯ ಮಾಡಲಾಗುತ್ತಿದೆ ಎಂದು ತಿಳಿಸಿದರು. ಅದರೆ, ಪ್ರಸ್ತುತ ನೀಡುತ್ತಿರುವ ವೇತನ ಆಯೋಗದಲ್ಲಿ ವಿವಿಧ ವರ್ಗದ ನೌಕರರು ಮಾಡುತ್ತಿರುವ ಕೆಲಸದ ಒತ್ತಡಕ್ಕೆ ಹೋಲಿಕೆ ಮಾಡಿದರೆ ಈಗ ನೀಡುತ್ತಿರುವ ಕನ್ಸಾಲಿಡೇಟೆಡ್ ಪೇ ಕಡಿಮೆ ಇರುವ ಕಾರಣ, 2012ರಿಂದ ಜಾರಿಗೆ ಬಂದಿರುವ ಪರಿಷ್ಕೃತ ವೇತನದನ್ವಯ ವೇತನವನ್ನು ಹೆಚ್ಚಳ ಮಾಡಲು ಟೆಂಡರ್ ಕರೆಯುವುದು ಸೂಕ್ತವೆಂದು ಎಲ್ಲಾ ಆಯುಕ್ತರು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಹಂತದಲ್ಲಿ ಕಾರ್ಯದರ್ಶಿಯವರು ನಿಯಮಾನುಸಾರ ಈ ರೀತಿ ವೇತನ ಪಾವತಿ ಮಾಡಲು ಅವಕಾಶ ಇಲ್ಲವೆಂದು ತಿಳಿಸಿದರು. ಅದ್ದರಿಂದ ಆಯೋಗದ ಎಲ್ಲಾ ಆಯುಕ್ತರು ಈ ಬಗ್ಗೆ ಆಯೋಗದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಕೆಲಸ ಒತ್ತಡ ಹೆಚ್ಚಿರುವ ಕಾರಣ ಹೊಸ ವೇತನ ಶ್ರೇಣಿಯ ಕನಿಷ್ಠ ವೇತನದ ಮೊತ್ತದಲ್ಲಿ ರೂ.100 ಕಡಿತಗೊಳಿಸಿ ಇದನ್ನು ಕನಿಷ್ಠ ವೇತನವೆಂದು ನಿಗಧಿಪಡಿಸಿ, ಅವಶ್ಯಕತೆ ಅನುಸಾರ ಕೆಲವು ಹುದ್ದೆಗಳಿಗೆ ಗುತ್ತಿಗೆ ಆಧಾರದಲ್ಲಿ ನಿವೃತ್ತ ನೌಕರರನ್ನು ಮರು ನೇಮಕ ಮಾಡಲು ಅಥವಾ ಲಭ್ಯವಾಗದಿದ್ದಲ್ಲಿ ಮಂಜೂರಾಗಿರುವ ಎಲ್ಲಾ ಹುದ್ದೆಗಳಿಗೆ ಅವಶ್ಯಕತೆ ಇರುವ ವಿದ್ಯಾರ್ಹತೆ ಅನುಸಾರ ಹೊರಗುತ್ತಿಗೆ ಆಧಾರದಲ್ಲಿ ಟೆಂಡರ್ ಮೂಲಕ ಮೇಲೆ ಹೇಳಿದಂತೆ ಆಯಾ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ವೇತನಕ್ಕಿಂತ 100ರೂ.ಗಳನ್ನು ಕಡಿತಗೊಳಿಸಿ ಇದನ್ನು ಕನ್ಸಾಲಿಡೇಟೆಡ್ ಪೇ ಎಂದು ನಿಗಧಿಪಡಿಸಿ ಹೊರಗುತ್ತಿಗೆ ಆಧಾರದಲ್ಲಿ ಇ–ಟೆಂಡರ್ ಮೂಲಕ ನೇಮಕಾತಿ ಮಾಡಿಕೊಳ್ಳಲು ಸರ್ಕಾರದ ಅನುಮತಿಗಾಗಿ ಪತ್ರ ಬರೆಯಲು ಆಯೋಗವು ತೀರ್ಮಾನಿಸಿ ಈ ಬಗ್ಗೆ ಕಾರ್ಯದರ್ಶಿಯವರಿಗೆ ಅಗತ್ಯ ಪತ್ರ ವ್ಯವಹಾರ ಮಾಡಲು ಸೂಚಿಸಿತು.

ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ಸರ್ಕಾರಕ್ಕೆ ಈ ಕುರಿತು ಪತ್ರ ಬರೆದು ಅನುಮೋದನೆ ಪಡೆಯಲು ತಿಳಿಸುತ್ತಾ, ಪತ್ರದಲ್ಲಿ ಆಯೋಗಕ್ಕೆ ಪೋಸ್ಟಲ್ ಆರ್ಡರ್ ಮೂಲಕ ಬಂದ ಹಣ ಹಾಗೂ ದಂಡ ರೂಪದಲ್ಲಿ ಬರುವ ಆದಾಯದ ಹಣವನ್ನು ನಮೂದಿಸಿ, ಪ್ರಸ್ತುತ ಇರುವ ಕಾರ್ಯಒತ್ತಡವನ್ನು ತಿಳಿಸುವುದರೊಂದಿಗೆ ವೇತನ ಪರಿಷ್ಕರಣೆ ಮಾಡಬೇಕೆಂದು ಸರ್ಕಾರವನ್ನು ಕೋರುವಂತೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರಾದ ಶ್ರೀ ಡಿ.ತಂಗರಾಜುರವರು ನೂತನ ಪರಿಷ್ಕರಣೆಯ ಮೂಲವೇತನ ಹಿಂದೆ ಇದ್ದ ಮೂಲವೇತನಕ್ಕಿಂತ ಎರಡು ಪಟ್ಟು ಹೆಚ್ಚಾಗಲಿದ್ದು, ಹೆಚ್ಚುವರಿ ಬಡ್ಜೆಟ್‌ನ ಅವಶ್ಯಕತೆಯನ್ನೂ ಸಹ ಸರ್ಕಾರಕ್ಕೆ ತಿಳಿಸುವಂತೆ ಕಾರ್ಯದರ್ಶಿಯವರಿಗೆ ತಿಳಿಸಿದರು. ಹಾಗೆಯೇ ಒಮ್ಮಿಂದೊಮ್ಮೆಲೇ ಈಗಿರುವ ವೇತನಕ್ಕಿಂತಲೂ 2ರಷ್ಟು ವೇತನವನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರ ಸಮ್ಮತಿ ಸೂಚಿಸದಿದ್ದಲ್ಲಿ ಆಯೋಗದಿಂದ ಸರ್ಕಾರಕ್ಕೆ ಸಂದಾಯವಾಗುತ್ತಿರುವ ಮೊತ್ತವನ್ನು ಸೂಚಿಸುತ್ತಾ ಶೇ.50ರಷ್ಟಾದರೂ ವೇತನ ಹೆಚ್ಚಳಕ್ಕಾಗಿ ಸರ್ಕಾರದ ಅನುಮತಿ ಕೋರಬಹುದು ಎಂದು ಸಭೆಗೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು, ಈ ಬಗ್ಗೆ ಸರ್ಕಾರದ ಜನಸ್ಪಂದನ ಇಲಾಖೆಯ ಆಡಳಿತಾತ್ಮಕ ಅನುಮೋದನೆ ಪಡೆಯಬೇಕಿದ್ದು, ನಂತರ ಆರ್ಥಿಕ ಇಲಾಖೆಯ ಅನುಮೋದನೆಯನ್ನು ಪಡೆಯಬೇಕಾಗಿದ್ದು, ಈ ಬಗ್ಗೆ ಸರ್ಕಾರಕ್ಕೆ ತಕ್ಷಣ ಪತ್ರ ವ್ಯವಹಾರ ಮಾಡಲು ತಿಳಿಸಿರುತ್ತಾರೆ. ಸರ್ಕಾರದಿಂದ ಹೊಸ ದರಗಳಲ್ಲಿ 2013–14ನೆ ಸಾಲಿಗೆ ಟೆಂಡರ್ ಕರೆದು ಅಂತಿಮಗೊಳಿಸುವವರೆಗೆ ಹಾಲಿ ಇರುವ ಟೆಂಡರ್ ದಾರರನ್ನು ಮುಂದುವರೆಸುವ ಬಗ್ಗೆ ಆಯೋಗವು ತೀರ್ಮಾನಿಸಿತು.

ಸ್ವಚ್ಛತೆ ಮತ್ತು ಸೆಕ್ಯೂರಿಟಿ ಟೆಂಡರ್‌ಗಳನ್ನು ಪ್ರತ್ಯೇಕವಾಗಿ ಹಿಂದಿನ ವರ್ಷದಂತೆ ಇ–ಟೆಂಡರ್ ಮೂಲಕ ಒಟ್ಟಿಗೆ ಕರೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಇದಕ್ಕೆ ಸರ್ಕಾರದ ಅಗತ್ಯ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಲು ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು.

ನಿರ್ಣಯ:

- **ಆಯೋಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಆಧಾರದ ನೌಕರರನ್ನು ನೇಮಕ ಮಾಡಿಕೊಳ್ಳಲು ಹಾಗೂ ಇವರ ವೇತನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ಕೈಗೊಳ್ಳುವುದು ಎಂದು ನಿರ್ಣಯಿಸಲಾಯಿತು.**

**ವಿಷಯ 4 – ವಾರ್ಷಿಕ ವರದಿ:**

ಆಯೋಗದಲ್ಲಿ ನಡೆಸಲಾಗುವ / ಇತ್ಯರ್ಥಪಡಿಸುವ ಪ್ರಕರಣಗಳ ಕುರಿತಂತೆ 06 ಕೋರ್ಟ್ ಹಾಲ್‌ಗಳ ಪ್ರಕರಣಗಳ ಮಾಹಿತಿಯನ್ನು ಅಪ್‌ಲೋಡ್ ಮಾಡಿ ನಿಖರ ಅಂಕಿ–ಅಂಶಗಳ ಮಾಹಿತಿಯನ್ನು ವಾರ್ಷಿಕ ವರದಿಯಲ್ಲಿ ನಮೂದಿಸುವ ಬಗ್ಗೆ ಮುಖ್ಯ ಆಯುಕ್ತರು ಕೇಳಲಾಗಿ, ಇದಕ್ಕೆ ಉತ್ತರಿಸಿದ ಶ್ರೀನಿವಾಸ್‌ರವರು ಸಭೆಗೆ ಅಂಕಿ–ಅಂಶಗಳ ಮಾಹಿತಿಯನ್ನು ನೀಡಿರುವುದಾಗಿ ತಿಳಿಸಿದರು.

ಇದಕ್ಕೆ ಸಂಬಂಧಿಸಿದಂತೆ ಮಾತನಾಡಿದ ಆಯುಕ್ತರಾದ ಶ್ರೀ ವಿರೂಪಾಕ್ಷಯ್ಯರವರು ಕೆಲವೊಂದು ಪ್ರಕರಣಗಳು ತಮ್ಮ ವ್ಯಾಪ್ತಿಗೆ ಬಾರದಿದ್ದರೂ ಗಣಕ ದತ್ತನಮೂದನೆಯ ಬಾಕಿ ಪ್ರಕರಣಗಳ ಅಡಿಯಲ್ಲಿ ನಮೂದಿಸಿದ್ದು ಇದನ್ನು ಸರಿಪಡಿಸುವಂತೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರಾದ ಶ್ರೀ ಡಿ.ತಂಗರಾಜುರವರು ತಮ್ಮ ಕೋರ್ಟ್ ಹಾಲ್ 03ರ ವ್ಯಾಪ್ತಿಯ ಪ್ರಕರಣಗಳಲ್ಲಿ 20 ಪ್ರಕರಣಗಳು ಬಾಕಿ ಇರುವುದಾಗಿ ಅಂಕಿ–ಅಂಶಗಳನ್ನು ನೀಡಲಾಗಿದ್ದು, ಬದಲಿಗೆ ತಮ್ಮ ಬಳಿ ಯಾವುದೇ ಪ್ರಕರಣಗಳು ಬಾಕಿ ಇರುವುದಿಲ್ಲವೆಂದು ಸಭೆಗೆ ತಿಳಿಸುತ್ತಾ, ಈ ರೀತಿಯ ತಪ್ಪುಗಳನ್ನು ಸರಿಪಡಿಸುವಂತೆ ತಿಳಿಸಿದರು.

ಇದಕ್ಕೆ ಉತ್ತರಿಸಿದ ಶ್ರೀನಿವಾಸ್‌ರವರು ಬೆಂಚ್ ಮಾಡಿಫಿಕೇಶನ್ ಮಾಡುವಾಗ ಬಹುಶಃ ಈ ರೀತಿಯ ವ್ಯತ್ಯಾಸವಾಗಿದ್ದು, ಕೂಡಲೇ ಸರಿಪಡಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ನಂತರ ಮಾತನಾಡಿದ ಮುಖ್ಯ ಆಯುಕ್ತರು, ಆಯೋಗದಲ್ಲಿರುವ ಸಾರ್ವಜನಿಕ ಮಾಹಿತಿ ಅಧಿಕಾರಿಯು ಅಗತ್ಯ ಮಾಹಿತಿಗಳನ್ನು ಅರ್ಜಿದಾರರಿಗೆ ನಿಗಧಿಪಡಿಸಲಾದ ಕಾಲಮಿತಿಯೊಳಗಾಗಿ ನೀಡಲು ಸೂಚಿಸಿದರು. ಮಾಹಿತಿ ನೀಡುವುದು ಪ್ರಥಮ ಆದ್ಯತೆಯಾಗಿದ್ದು, ಕೆಲವೊಂದು ಪ್ರಕರಣಗಳಲ್ಲಿ ಕಡತ ಲಭ್ಯವಿಲ್ಲವೆಂಬ ಕಾರಣ ನೀಡಲಾಗುತ್ತಿದೆ, ಆದರೆ ಮಾಹಿತಿ ಕೋರಿಕೆ ಅರ್ಜಿಯನ್ನು ಆಧರಿಸಿ ಮಾಹಿತಿ ನೀಡಬೇಕಾಗಿರುತ್ತದೆ. ಇದನ್ನು ಪ್ರಥಮ ಆದ್ಯತೆಯ ಕರ್ತವ್ಯವಾಗಿ ಕ್ರಮ ವಹಿಸುವಂತೆ ಆಯೋಗದ ಅಧೀನ ಕಾರ್ಯದರ್ಶಿ ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಯವರಿಗೆ ತಿಳಿಸಲಾಯಿತು.

**ನಿರ್ಣಯ: ವಾರ್ಷಿಕ ವರದಿಗೆ ನಮೂದಿಸಲು ಸಂಪೂರ್ಣ ಮಾಹಿತಿಯನ್ನು ತಪ್ಪುಗಳಿಲ್ಲದಂತೆ ಸಿದ್ಧಪಡಿಸಿ ಸ್ವೀಕರಿಸಿದ / ಇತ್ಯರ್ಥಪಡಿಸಲಾದ ವರದಿಯನ್ನು ನಿಖರವಾಗಿ ನೀಡುವಂತೆ ಮತ್ತು ಈ ಬಗ್ಗೆ ಪರಿಶೀಲಿಸುವಂತೆ ಆಯೋಗದ ಕಾರ್ಯದರ್ಶಿಗಳಿಗೆ ಮುಖ್ಯ ಆಯುಕ್ತರು ಸೂಚಿಸಿದರು.**

**ವಿಷಯ 5 – ಮೂರು ವರ್ಷಗಳಿಗೂ ಮೀರಿದ ಕಡತಗಳ ನಾಶಪಡಿಸುವಿಕೆ:**

ಇದಕ್ಕೆ ಸಂಬಂಧಿಸಿದಂತೆ ಮಾತನಾಡಿದ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ಈಗಾಗಲೇ ಕಾರ್ಯಾದೇಶವನ್ನು ಕಿಯೋನಿಕ್ಸ್ ಸಂಸ್ಥೆಗೆ ನೀಡಲಾಗಿದ್ದು, ಈವರೆವಿಗೂ ಕಾರ್ಯಪ್ರಾರಂಭವಾಗದ ಬಗ್ಗೆ ಸ್ಪಷ್ಟೀಕರಣ ಕೇಳಿದರು. ಇದಕ್ಕೆ ಸಂಬಂಧಿಸಿದಂತೆ ಕಿಯೋನಿಕ್ಸ್ ಸಂಸ್ಥೆಯ ಅಧಿಕಾರಿಯು ಪ್ರಸ್ತುತ ತಮ್ಮ ಸಿಬ್ಬಂದಿಯವರನ್ನು ಚುನಾವಣೆ ಕಾರ್ಯಕ್ಕೆ ನಿಯೋಜಿಸಲಾಗಿರುವುದರಿಂದ ಕೆಲಸ ಪ್ರಾರಂಭಿಸಲು ವಿಳಂಬವಾಗುತ್ತಿದೆ ಎಂದು ತಿಳಿಸುತ್ತಾ, ಆದಷ್ಟು ಬೇಗನೇ ದತ್ತನಮೂದನೆಯ ಕಾರ್ಯವನ್ನು ಪ್ರಾರಂಭಮಾಡುವುದಾಗಿ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರಾದ ಶ್ರೀ ಡಿ.ತಂಗರಾಜುರವರು ಪ್ರಾರಂಭಿಕ ಹಂತವಾಗಿ ಕಡತಗಳನ್ನು ವರ್ಷಾನುಸಾರ ಮತ್ತು ಕ್ರಮಸಂಖ್ಯೆಗೆ ಅನುಸಾರವಾಗಿ ಜೋಡಿಸಿಕೊಳ್ಳುವ ಕಾರ್ಯವನ್ನು ಮಾಡಬೇಕಾಗಿದ್ದು, ಅದಕ್ಕಾಗಿ ಒಂದಿಬ್ಬರು ಸಿಬ್ಬಂದಿಯನ್ನು ನೇಮಿಸಿದರೆ ಸಾಕಾಗುವುದಾಗಿ ತಿಳಿಸುತ್ತ, ತದನಂತರ ದತ್ತನಮೂದನೆಯ ಕಾರ್ಯವನ್ನು ಪ್ರಾರಂಭಿಸುವಂತೆ ಸೂಚಿಸಿದರು.

ನಂತರ ಮಾತನಾಡಿದ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ಮೂರು ವರ್ಷಗಳ ಅವಧಿ ಮುಗಿದ ಕಡತಗಳನ್ನು ನಾಶಪಡಿಸಬೇಕಾಗಿದ್ದು, ನಂತರ ಉಳಿದ ಕಡತಗಳನ್ನು ಸೂಕ್ತ ರೀತಿಯಲ್ಲಿ ಜೋಡಣೆ ಮಾಡುವ ಕಾರ್ಯವೂ ಆಗಬೇಕಿದೆ ಎಂದು ತಿಳಿಸಿದರು.

ಇದಕ್ಕೆ ಸಂಬಂಧಿಸಿದಂತೆ ಉತ್ತರಿಸಿದ ಶ್ರೀನಿವಾಸ್‌ರವರು ಆಯೋಗದ ನಿಕಟಪೂರ್ವ ಕಾರ್ಯದರ್ಶಿಗಳು ಮೊದಲು ಕಡತಗಳ ಮಾಹಿತಿಯನ್ನು ದತ್ತನಮೂದನೆ ಮಾಡಿ ದಾಖಲಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ ಕಿಯೋನಿಕ್ಸ್ ಸಂಸ್ಥೆಗೆ ಕಾರ್ಯಾದೇಶ ನೀಡಿದ್ದು, ಕಡತ ನಾಶಪಡಿಸಲು ಕಾರ್ಯಾದೇಶ ನೀಡಲಾಗಿಲ್ಲವೆಂದು ತಿಳಿಸುತ್ತಾ, ಇದಕ್ಕಾಗಿ ಕಡತಗಳನ್ನು ಸಂಗ್ರಹಿಸಲು ಸ್ಥಳಾವಕಾಶದ ಕೊರತೆಯಿರುವುದಾಗಿ ತಿಳಿಸಿದರು.

ಇದಕ್ಕೆ ಸ್ಪಂದಿಸಿದ ಆಯುಕ್ತರಾದ ಶ್ರೀ ವಿರೂಪಾಕ್ಷಯ್ಯರವರು ಬಹುಮಹಡಿ ಕಟ್ಟಡದಲ್ಲಿರುವ 5ನೇ ಮಹಡಿಯ ಕಂದಾಯ ಇಲಾಖೆಯ ಕೆಲವು ಶಾಖೆಗಳು ಕಂದಾಯಭವನಕ್ಕೆ ಸ್ಥಳಾಂತರಗೊಂಡಿದ್ದು, ಅಲ್ಲಿ ಪ್ರಸ್ತುತ ಲಭ್ಯವಿರುವ ಎರಡು ಕೊಠಡಿಗಳನ್ನು ಆಯೋಗಕ್ಕೆ ನೀಡುವಂತೆ ಸರ್ಕಾರಕ್ಕೆ ಪತ್ರ ಬರೆಯುವಂತೆ ಆಯೋಗದ ಕಾರ್ಯದರ್ಶಿಗಳಿಗೆ ತಿಳಿಸುತ್ತಾ ಈ ಬಗ್ಗೆ ತ್ವರಿತವಾಗಿ ಕ್ರಮ ವಹಿಸುವಂತೆ ತಿಳಿಸಿದರು ಮತ್ತು 3 ವರ್ಷ ಮೀರಿದ ಕಡತಗಳನ್ನು ದತ್ತನಮೂದನೆ ಮಾಡಿದ ನಂತರ ನಾಶಪಡಿಸಲು ಕಿಯೋನಿಕ್ಸ್ ಸಂಸ್ಥೆಗೆ ಕಾರ್ಯಾದೇಶ ನೀಡಲು ಸಹ ಕ್ರಮ ವಹಿಸುವಂತೆ ತಿಳಿಸಿದರು. ನಾಶಪಡಿಸಿದ ಕಡತಗಳ ಪಟ್ಟಿಯನ್ನು ಸಿದ್ಧಪಡಿಸಿದ ನಂತರ ಕಡತಗಳ ನಾಶದ ಬಗ್ಗೆ ವಹಿ ತಯಾರಿಸಿ ಎರಡನ್ನೂ ಗಣಕೀಕೃತವಾಗಿ ದಾಖಲಿಸಬೇಕಾಗಿದ್ದು, ಮೂರು ವರ್ಷಗಳ ಅವಧಿ ಮೀರಿದ ಕಡತಗಳನ್ನು ನಾಶಪಡಿಸಲು ನಿಯಮಾನುಸಾರ ರದ್ದಿ ಕಾಗದ ಕೊಳ್ಳುವವರ ವಿವರವನ್ನು ಸರ್ಕಾರದ ಸಾಮಗ್ರಿ ಖರೀದಿ ಇಲಾಖೆಯಿಂದ ಪಡೆದು ಈ ಏಜೆನ್ಸಿಗೆ ಹಳೆ ಕಡತಗಳನ್ನು ಲೆಕ್ಕ ಹಾಕಿ ನಾಶಪಡಿಸಲು ನೀಡುವಂತೆ ತಿಳಿಸಿದರು. ಆಯೋಗದ ಅಧೀನ ಕಾರ್ಯದರ್ಶಿಗಳು ಆದೇಶ ನೀಡಿ ದೃಢೀಕರಿಸಿದ ಮೇಲೆ ಅಂತಹ ಕಡತಗಳನ್ನು ನಾಶಪಡಿಸಬೇಕು. ಇದು ನಿಯಮಾನುಸಾರ ನಡೆಯುವ ಪ್ರಕ್ರಿಯೆಯಾಗಿದ್ದು, ಇದನ್ನು ಪಾಲಿಸುವಂತೆ ತಿಳಿಸುತ್ತಾ, ಕೂಡಲೇ ಈ ಬಗ್ಗೆ ಕ್ರಮ ವಹಿಸುವಂತೆ ಆಯೋಗದ ಕಾರ್ಯದರ್ಶಿಗಳಿಗೆ ತಿಳಿಸಿದರು.

ನಂತರ ಇದಕ್ಕೆ ಸ್ಪಂದಿಸಿದ ಆಯುಕ್ತರಾದ ಶ್ರೀ ಡಿ.ತಂಗರಾಜುರವರು ಕಿಯೋನಿಕ್ಸ್ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಅಂದರೆ ಕಡತಗಳ ದಾಖಲೀಕರಣ, ಜೋಡಣೆ ಮತ್ತು ತದನಂತರ ನಾಶಪಡಿಸುವ ಕುರಿತಂತೆ ಕಾರ್ಯಾದೇಶ ನೀಡಲು ಕ್ರಮವಹಿಸಬೇಕೆಂದು ಆಯೋಗದ ಕಾರ್ಯದರ್ಶಿಗಳಿಗೆ ತಿಳಿಸಿದರು. ಹಾಗೂ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಹಾಗೂ ಇತರೆ ನ್ಯಾಯಾಲಯದಲ್ಲಿ ಅಪೀಲ್ ಇರುವ ಪ್ರಕರಣಗಳನ್ನು ಹೊರತುಪಡಿಸಿ ಮೂರು ವರ್ಷಗಳ ಅವಧಿ ಮೀರಿದ ಕಡತಗಳನ್ನು ನಾಶಪಡಿಸಲು ಕ್ರಮವಹಿಸಬೇಕೆಂದು ತಿಳಿಸಿದರು.

ನಿರ್ಣಯ :

1. **ಮೂರು ವರ್ಷಗಳ ಅವಧಿ ಮೀರಿದ ಕಡತಗಳ ನೋಂದಣಿ ಮತ್ತು ನಾಶಪಡಿಸುವಿಕೆಗೆ ಕಿಯೋನಿಕ್ಸ್ ಸಂಸ್ಥೆಗೆ ಕಾರ್ಯಾದೇಶ ನೀಡುವುದು.**
2. **ನಂತರ ದತ್ತಾಂಶ ಗಣಕೀಕರಣ ಮಾಡಿ ಅನಂತರ ಕಡತಗಳನ್ನು ವರ್ಷಾವಾರು ಮತ್ತು ಕ್ರಮಸಂಖ್ಯೆ ಅನುಸಾರವಾಗಿ ಜೋಡಣೆ ಮಾಡುವುದು.**
3. **ಕಡತಗಳ ನೋಂದಣಿ ಮತ್ತು ದಾಖಲೀಕರಣ ಕೆಲಸವನ್ನು ಮಾಡುವುದು.**
4. **ಸರ್ಕಾರಕ್ಕೆ ಕೂಡಲೇ ಪತ್ರ ಬರೆದು ಆಯೋಗದ ಕಡತಗಳ ಸಂಗ್ರಹಣೆಗಾಗಿ ಬಹುಮಹಡಿ ಕಟ್ಟಡದ 5ನೇ ಮಹಡಿಯಲ್ಲಿ ಖಾಲಿಯಿರುವ ಕೊಠಡಿಗಳನ್ನು ಪಡೆದುಕೊಳ್ಳಲು ಕ್ರಮವಹಿಸುವುದು.**
5. **ರದ್ದಿ ಕಾಗದ ಪಡೆಯುವವರ ವಿವರವನ್ನು ಸರ್ಕಾರದ ಸಾಮಗ್ರಿ ಖರೀದಿ ಇಲಾಖೆಯಿಂದ ಪಡೆದು ಅನಂತರ ನಾಶಪಡಿಸಲಾಗುವ ಕಡತಗಳನ್ನು ಅಧೀನ ಕಾರ್ಯದರ್ಶಿಗಳ ದೃಢೀಕರಣದ ನಂತರ ನಾಶಪಡಿಸಲು ನೀಡುವುದು.**
6. **ಮಾನ್ಯ ಉಚ್ಛನಾಯಾಲಯದಲ್ಲಿ ಹಾಗೂ ಇತರೆ ನ್ಯಾಯಾಲಯಗಳಲ್ಲಿ ಆಯೋಗದ ಆದೇಶದ ವಿರುದ್ಧ ಅಪೀಲು ಬಾಕಿ ಇರುವ ಪ್ರಕರಣಗಳನ್ನು ಹೊರತುಪಡಿಸಿ, ಉಳಿದಂತೆ ಮೂರು ವರ್ಷಗಳ ಅವಧಿ ಮೀರಿದ ಕಡತಗಳನ್ನು ನಾಶಪಡಿಸಲು ಕ್ರಮ ವಹಿಸುವುದು.**

**ವಿಷಯ 6 – ಕಾಯಿದೆಯ ದುರ್ಬಳಕೆ ಪ್ರಕರಣ ಮತ್ತು ಏಕ ವ್ಯಕ್ತಿಯು ಅತಿ ಹೆಚ್ಚು ಅರ್ಜಿ ಸಲ್ಲಿಸುವ ಬಗ್ಗೆ :**

ಇದಕ್ಕೆ ಸಂಬಂಧಿಸಿದಂತೆ ವಿಷಯ ಪ್ರಸ್ತಾಪಿಸಿದ ಮುಖ್ಯ ಆಯುಕ್ತರು ಕೆಲವೊಂದು ಪ್ರಕರಣಗಳಲ್ಲಿ ಕಾಯಿದೆಯ ದುರ್ಬಳಕೆಯಾಗುತ್ತಿರುವುದಾಗಿ ಸರ್ಕಾರದಿಂದ ಪತ್ರ ಬಂದಿದ್ದು, ಪೂರಕ ಮಾಹಿತಿಯ ಬಗ್ಗೆ ಸಭೆಯನ್ನು ಕೇಳಲಾಗಿ, ಇದಕ್ಕೆ ಸ್ಪಂದಿಸಿದ ಆಯುಕ್ತರಾದ ಶ್ರೀ ವಿರೂಪಾಕ್ಷಯ್ಯರವರು ನಿಯಮ 62 ರಂತೆ ಮಾಹಿತಿ ಕೇಳಲು ಕಾರಣ ನೀಡುವಂತೆ ಕೇಳಲು ಬರುವುದಿಲ್ಲವಾಗಿ ತಿಳಿಸುತ್ತಾ ಈ ಬಗ್ಗೆ ಮಾಹಿತಿಯು ಆಯೋಗದ ಬಳಿ ಇಲ್ಲದಿರುವುದರಿಂದ ಇಲಾಖೆಯ ಮುಖ್ಯಸ್ಥರಿಗೆ ಕಾಯಿದೆಯು ದುರ್ಬಳಕೆಯಾಗಿದ್ದ ಪಕ್ಷದಲ್ಲಿ ಸಂಪೂರ್ಣ ಮಾಹಿತಿಯಿರುತ್ತದೆ ಮತ್ತು ಅಂತಹ ಪ್ರಕರಣಗಳಿದ್ದಲ್ಲಿ ಇಲಾಖೆಯ ಮುಖ್ಯಸ್ಥರಿಂದ ಮಾಹಿತಿಯನ್ನು ಸರ್ಕಾರ ನೇರವಾಗಿ ಪಡೆದುಕೊಳ್ಳಬಹುದಾಗಿ ತಿಳಿಸಿದರು.

ನಂತರ ಮಾತನಾಡಿದ ಮುಖ್ಯ ಆಯುಕ್ತರು ಒಬ್ಬ ವ್ಯಕ್ತಿಯೂ ಹೆಚ್ಚು ಅರ್ಜಿಗಳನ್ನು ನೀಡಿ ಮಾಹಿತಿ ಕೋರಲಾಗುತ್ತಿದ್ದು, ಇದರಿಂದ ಅನ್ಯ ಅರ್ಜಿದಾರರಿಗೆ ತೊಂದರೆಯಾಗಿ ಅವರುಗಳ ಮೇಲ್ಮನವಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ವಿಳಂಬವಾಗುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರಾದ ಶ್ರೀ ಡಿ.ತಂಗರಾಜುರವರು ಅಂತಹ ಪ್ರಕರಣಗಳ ವಿಚಾರಣೆಯನ್ನು ಕೊನೆಯಲ್ಲಿ ನಡೆಸಬಹುದೆಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರಾದ ಶ್ರೀ ಜೆ.ಎಸ್.ವಿರೂಪಾಕ್ಷಯ್ಯರವರು ನಿಯಮಾನುಸಾರ ಮೊದಲು ಮಾಹಿತಿ ಕೋರಿ ಪಿಐಓಗೆ ಅರ್ಜಿ ಸಲ್ಲಿಸಬೇಕಾಗಿದ್ದು, ನಂತರ ಅಪೀಲು ಪ್ರಾಧಿಕಾರ ನಂತರ ಆಯೋಗಕ್ಕೆ ಅಪೀಲು ನೀಡುವ ನಿಯಮವಿದೆ, ಹೆಚ್ಚು ಅರ್ಜಿಗಳನ್ನು ನೀಡುವವರ ಅರ್ಜಿಗಳನ್ನು ಪ್ರಾಥಮಿಕ ಹಂತದಲ್ಲಿಯೇ ಮಾಹಿತಿಯ ಗಂಭೀರತೆಯನ್ನು ಪರಿಗಣಿಸಿ ಸಾರ್ವಜನಿಕ ಹಿತಾಸಕ್ತಿಯಿಲ್ಲದಿದ್ದಲ್ಲಿ ಅವುಗಳನ್ನು ತಿರಸ್ಕರಿಸಲು ಅವಕಾಶವಿರುತ್ತದೆ. ಇದರಿಂದ ಪದೇ ಪದೇ ಹೆಚ್ಚು ಹೆಚ್ಚು ಅರ್ಜಿಗಳನ್ನು ನೀಡುವ ಹವ್ಯಾಸವಿರುವವರೂ ಸಹ ಕಾಯಿದೆಯ ಗಂಭೀರತೆಯನ್ನು ಅರಿಯುವಂತಾಗುತ್ತದೆ ಎಂದು ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ನಿಯಮಗಳಲ್ಲಾಗುವ ತಿದ್ದುಪಡಿಗಳು, ಸುಪ್ರೀಂ ಕೋರ್ಟ್‌ನ / ಹೈ ಕೋರ್ಟ್‌ನ ತೀರ್ಪುಗಳು ಮತ್ತು ಪೂರಕ ಮಾಹಿತಿಯನ್ನು ಪಡೆದು ಕಾಲಕಾಲಕ್ಕೆ ಆಯೋಗಕ್ಕೆ ನೀಡಬೇಕೆಂದು ಉದಾಹರಣೆಗೆ: ಮಾಹಿತಿ ಕೋರುವಾಗ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದು, ನಿರ್ದಿಷ್ಟ ಮಾಹಿತಿ ಕೋರಿರುವುದರ ಬಗ್ಗೆ ಸ್ಪಷ್ಟೀಕರಣ ನೀಡುವುದು, ಆಸ್ತಿಹೊಣೆಗಾರಿಕೆ ಪತ್ರದ ಮಾಹಿತಿಯನ್ನು ಒದಗಿಸಬೇಕಾಗಿಲ್ಲದಿರುವುದು. ಹೀಗೆ ಹಲವು ವಿಷಯಗಳ ಮಾಹಿತಿಯನ್ನು ನೀಡುವುದು ಮತ್ತು ಅದರನ್ವಯ ಕ್ರಮ ವಹಿಸುವಂತೆ ಸಂಬಂಧಪಟ್ಟವರಿಗೆ ಸುತ್ತೋಲೆ ಮೂಲಕ ತಿಳಿಸಬೇಕೆಂದು ಜನಸ್ಪಂದನ ಇಲಾಖೆಯ ಅಧೀನ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದರು. ಈ ಬಗ್ಗೆ ಪರಿಶೀಲಿಸುವಂತೆ ಕಾರ್ಯದರ್ಶಿಗಳಿಗೆ ತಿಳಿಸಿದರು. ಹೆಚ್ಚು ಮೇಲ್ಮನವಿಗಳನ್ನು ನೀಡುವ ಪ್ರಕರಣಕ್ಕೆ ಸಂಬಂಧಿಸಿದಂತೆ ತಿಂಗಳಿಗೆ ಕೇವಲ 10 ಪ್ರಕರಣಗಳನ್ನು ಮಾತ್ರ ವಿಚಾರಣೆಗೆ ತೆಗೆದುಕೊಂಡು ಉಳಿಕೆ ಮೇಲ್ಮನವಿಗಳನ್ನು ನಂತರದ ತಿಂಗಳಲ್ಲಿ ಮಾತ್ರ ವಿಚಾರಣೆಗೆ ಕೈಗೊಳ್ಳುವುದು ಸೂಕ್ತವೆಂದು ಸಭೆಗೆ ತಿಳಿಸಿದರು. ಇದಕ್ಕೆ ಸಭೆಯ ಇತರೆ ಆಯುಕ್ತರುಗಳು ಸಹ ಒಪ್ಪಿಗೆ ಸೂಚಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಆಯುಕ್ತರು ಆಯೋಗವೇ ಎಲ್ಲವನ್ನೂ ತರಿಸಿ ಮಾಹಿತಿ ನೀಡಲು ಸಾಧ್ಯವಾಗುವುದಿಲ್ಲವಾದ್ದರಿಂದ ಜನಸ್ಪಂದನ ಇಲಾಖೆಯು ಈ ಬಗ್ಗೆ ಕ್ರಮ ವಹಿಸಬೇಕು ಮತ್ತು ಹಿಂದಿನ ಸಭೆಗಳಲ್ಲಿ ಕೈಗೊಂಡ ನಿರ್ಣಯಗಳನ್ನು ಜಾರಿಗೆ ತರುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಜನಸ್ಪಂದನ ಇಲಾಖೆಯ ಅಧಿಕಾರಿಗಳಿಗೆ ಮತ್ತು ಆಯೋಗದ ಕಾಯದರ್ಶಿಯವರಿಗೆ ಸೂಚನೆ ನೀಡಿದರು.

ನಿರ್ಣಯ :

1. **ಒಬ್ಬ ವ್ಯಕ್ತಿಯು 200ಕ್ಕೂ ಹೆಚ್ಚು ಅರ್ಜಿಗಳನ್ನು ಮಾಹಿತಿ ಕೋರಿ ನೀಡಿರುವ ಸಂಗತಿಯನ್ನು ಆಯೋಗವು ಗಮನಿಸಿದ್ದು, ಇದರಿಂದ ಅನ್ಯರು ಮಾಹಿತಿಯನ್ನು ಪಡೆಯುವ ಹಕ್ಕಿನಿಂದ ವಂಚಿತರಾಗಲಿದ್ದು, ಅಂತಹ ಮೇಲ್ಮನವಿ ಪ್ರಕರಣಗಳಲ್ಲಿ ಒಂದು ತಿಂಗಳಲ್ಲಿ ಕೇವಲ 10 ಪ್ರಕರಣಗಳನ್ನು ವಿಚಾರಣೆಗೆ ಒಳಪಡಿಸಲಾಗುವುದು.**
2. **ಅರ್ಜಿದಾರರಿಗೆ ಪ್ರಕರಣದ ಬಗ್ಗೆ ಮಾಹಿತಿಯನ್ನು ಒದಗಿಸುವ ಅಂಚೆ ವೆಚ್ಚವು ಅಧಿಕವಾಗಿದ್ದು, ಪೋಸ್ಟಲ್ ಆರ್ಡರ್ ಶುಲ್ಕವನ್ನು ಹೆಚ್ಚು ಮಾಡಲು ಜನಸ್ಪಂದನ ಇಲಾಖೆಯು ಕ್ರಮ ವಹಿಸಬಹುದಾಗಿ ಸಭೆಯಲ್ಲಿ ಅಭಿಪ್ರಾಯಪಡಲಾಯಿತು.**
3. **ಆಯಾ ಕಾಲಕ್ಕೆ ನಿಯಮಗಳಲ್ಲಾಗುವ ತಿದ್ದುಪಡಿ, ಸುಪ್ರೀಂ ಕೋರ್ಟ್/ ಹೈ ಕೋರ್ಟ್‌ನಲ್ಲಿನ ತೀರ್ಪುಗಳು ಮತ್ತು ಮಾಹಿತಿ ಹಕ್ಕಿಗೆ ಸಂಬಂಧಿಸಿದ ಟಿಪ್ಪಣಿ/ಆದೇಶ/ಸುತ್ತೋಲೆಗಳನ್ನು ಜನಸ್ಪಂದನ ಇಲಾಖೆ ಸಂಗ್ರಹಿಸಿ ಆಯೋಗಕ್ಕೆ ಹಾಗೆಯೇ ಎಲ್ಲಾ ಇಲಾಖೆಗಳಿಗೆ ಒದಗಿಸುವುದು.**

ಈ ವಿಷಯದ ಚರ್ಚೆಯ ನಂತರ ಆಯೋಗದ ಕಾನೂನು ಅಧಿಕಾರಿಯವರು ಸಭೆಯಿಂದ ಬೀಳ್ಕೊಂಡರು.

**ವಿಷಯ 7 – ಆಯೋಗದ ಕಾನೂನು ಅಧಿಕಾರಿಯವರ ಕಾರ್ಯಾವಧಿಯ ವಿಸ್ತರಣೆ:**

ಆಯೋಗದ ಕಾನೂನು ಅಧಿಕಾರಿಯವರ ಕಾರ್ಯಾವಧಿಯು ಆಗಸ್ಟ್–2013ಕ್ಕೆ ಕೊನೆಗೊಳ್ಳಲಿದ್ದು, ಇನ್ನೂ 2 ವರ್ಷಗಳ ಅವಧಿಗೆ ಆಯೋಗದ ಕಾನೂನು ಅಧಿಕಾರಿಯವರ ಕಾರ್ಯಾವಧಿಯನ್ನು ವಿಸ್ತರಿಸುವ ಕುರಿತು ಮುಖ್ಯ ಆಯುಕ್ತರು ಪ್ರಸ್ತಾಪಿಸಿದರು.

ಇದಕ್ಕೆ ಸ್ಪಂದಿಸಿದ ಆಯುಕ್ತರಾದ ಶ್ರೀ ವಿರೂಪಾಕ್ಷಯ್ಯರವರು ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಒಬ್ಬ ಆಯುಕ್ತರಿಗೆ ಒಬ್ಬರು ನಿವೃತ್ತ ಜಿಲ್ಲಾ ನ್ಯಾಯಾಧೀಶರ ಗ್ರೇಡ್‌ನವರನ್ನು ಕಾನೂನು ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿದ್ದು, ರಾಜ್ಯ ಮಾಹಿತಿ ಆಯೋಗಕ್ಕೆ ಕನಿಷ್ಟ ಇಬ್ಬರು ಕಾನೂನು ಅಧಿಕಾರಿಗಳನ್ನಾದರೂ ನೇಮಕ ಮಾಡಬೇಕಿದ್ದು, ನುರಿತ ವಕೀಲರನ್ನು 20 ಸಾವಿರ ತಲಾ ಗೌರವಧನದಂತೆ ಕಾನೂನು ಅಧಿಕಾರಿಗಳನ್ನಾಗಿ ನೇಮಕ ಮಾಡಿಕೊಳ್ಳಲು ಆಯೋಗದ ಒಪ್ಪಿಗೆ ಪಡೆದು ಸರ್ಕಾರಕ್ಕೆ ಪತ್ರ ಬರೆಯುವಂತೆ ಆಯೋಗದ ಕಾರ್ಯದರ್ಶಿಯವರಿಗೆ ಸೂಚನೆ ನೀಡಿದರು.

ನಿರ್ಣಯ :

1. **ರಾಜ್ಯ ಮಾಹಿತಿ ಆಯೋಗದ ಕಾನೂನು ಅಧಿಕಾರಿಯವರ ಕಾರ್ಯಾವಧಿ 2 ವರ್ಷಗಳ ಮಟ್ಟಿಗೆ ವಿಸ್ತರಣೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.**

2. **ಈಗಾಗಲೇ ಹಿಂದಿನ ಸಭೆಗಳಲ್ಲಿ ಸೂಚಿಸಿರುವಂತೆ ನೆರೆ ರಾಜ್ಯಗಳಲ್ಲಿ ಪ್ರತಿಯೊಬ್ಬ ಆಯುಕ್ತರಿಗೆ ಒದಗಿಸಲಾದ ಸಿಬ್ಬಂದಿ ಹಾಗೂ ಅಧಿಕಾರಿಗಳ ವಿವರಗಳನ್ನು ಆಯೋಗದ ಕಾರ್ಯದರ್ಶಿಯವರು ಆದಷ್ಟು ಬೇಗನೆ ಪಡೆದುಕೊಳ್ಳುವುದು.**

ನಂತರ ಮಾತನಾಡಿದ ಮುಖ್ಯ ಆಯುಕ್ತರು ಸಭೆಯಲ್ಲಿ ಕೈಗೊಳ್ಳಲಾಗಿರುವ ನಿರ್ಣಯಗಳನ್ನು ಜಾರಿಗೆ ತರುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಅತ್ಯಾವಶ್ಯಕವೆಂದು ತಿಳಿಸುತ್ತಾ, ಹಿಂದಿನ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಕೂಡಲೇ ಜಾರಿಗೆ ತರುವಂತೆ ಆಯೋಗದ ಕಾರ್ಯದರ್ಶಿಯವರಿಗೆ ಸೂಚನೆ ನೀಡಿದರು.

ನಂತರ ಸಭೆಯಲ್ಲಿನ ಆಯುಕ್ತರುಗಳು, ತಮಗೆ ಮಾಹಿತಿ ಹಕ್ಕಿಗೆ ಸಂಬಂಧಿಸಿದಂತೆ ನಿಯತಕಾಲಿಕೆಗಳನ್ನು ಒದಗಿಸಲಾಗುತ್ತಿಲ್ಲವಾದ್ದರಿಂದ Right to Information Journal ನಿಯತಕಾಲಿಕೆಗೆ ಚಂದಾದಾರರಾಗಿ ಹಣ ಪಾವತಿಸಿ ಎಲ್ಲಾ ಆಯುಕ್ತರುಗಳಿಗೆ ನಿಯತಕಾಲಿಕೆಗಳನ್ನು ಒದಗಿಸುವಂತೆ ತಿಳಿಸಿದರು. ಇದರ ಬಗ್ಗೆ ಕೂಡಲೇ ಕ್ರಮವಹಿಸುವಂತೆ ಮುಖ್ಯ ಆಯುಕ್ತರು ಆಯೋಗದ ಕಾರ್ಯದರ್ಶಿಯವರಿಗೆ ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

**ಮುಖ್ಯ ಮಾಹಿತಿ ಆಯುಕ್ತರು,**

<u>ಪ್ರತಿಯನ್ನು:</u>

1. ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತ ಮುಖ್ಯ ಮಾಹಿತಿ ಆಯುಕ್ತರ ಗಮನಕ್ಕೆ ತರಲು ಸಲ್ಲಿಸಿದೆ.
2. ಎಲ್ಲಾ ರಾಜ್ಯ ಮಾಹಿತಿ ಆಯುಕ್ತರಗಳ ಆಪ್ತ ಸಹಾಯಕರುಗಳಿಗೆ ಕಳುಹಿಸುತ್ತ ಮಾಹಿತಿ ಆಯುಕ್ತರ ಗಮನಕ್ಕೆ ತರಲು ಸಲ್ಲಿಸಿದೆ.
3. ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಸಿಆಸುಇ (ಜನಸ್ಪಂದನ), ವಿ.ವಿ.ಟವರ್, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಇ-ಆಡಳಿತ ಇಲಾಖೆ, 2ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ನಿರ್ದೇಶಕರು (ಕಾರ್ಯಚರಣೆ), ನಂ.29/1, ಕಿಯೋನಿಕ್ಸ್ ಸಂಸ್ಥೆ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01.
7. ಕಾನೂನು ಅಧಿಕಾರಿಗಳು, ಕಮಾಆ, ಬೆಂಗಳೂರು.
8. ಅಧೀನ ಕಾರ್ಯದರ್ಶಿಗಳು, ಕಮಾಆ, ಬೆಂಗಳೂರು.
9. ಕಾರ್ಯದರ್ಶಿಯವರ ಆಪ್ತಶಾಖೆಗೆ
10. ಶಾಖಾಧಿಕಾರಿಗಳು, ಕಮಾಆ, ಬೆಂಗಳೂರು.
11. ಶ್ರೀ ಶ್ರೀನಿವಾಸ್, ಎ.ಎಸ್.ಓ., ಕಮಾಆ, ಬೆಂಗಳೂರು.
12. ಕಛೇರಿ ಪತ್ರಿ.